

## ಕಳಿಲಾಕ ಇದ್ದ ಬಿದ್ದ ಕೇಡ, ಬೆಳುದಿಂಗಳ ನೋಡ

ಆರಾಡ ಮುನಿಗಳೊಂದಿಗೆ ಗೌತಮರ ಭೇಟಿಯಾಯಾಯಿತು. ಸಾಂಖ್ಯವೆಂದರೆ ಏನು? ಯೋಗವೆಂದರೆ ಏನು? ಧ್ಯಾನವೆಂದರೆ ಏನು? ಇವುಗಳಿಂದ ಏನು ಫಲ? ಯೋಗ ಸಮಾಧಿಯಲ್ಲಿ ಎಷ್ಟು ನೆಲೆ? ಆ ದಿವ್ಯ ನೆಲೆಯನ್ನೇರುವುದು ಹೇಗೆ? ಇತ್ಯಾದಿಗಳನ್ನೆಲ್ಲ ಅವರು ತಿಳಿಸಿ ಹೇಳಿದರು. ಬಲ್ಲವರು ಈ ನೆಲೆಯನ್ನೇ ಮೋಕ್ಷವೆನ್ನುವರು ಎಂದು ಆರಾಡ ಮುನಿ ತಮಗೆ ತಿಳಿದ ಜ್ಞಾನವನ್ನೆಲ್ಲ ಅರುಹಿದರು. ಆದರೆ ಆತ್ಮವೆಂದರೇನು ಎಂಬ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಎಲ್ಲವೂ ನಶ್ವರವೆನ್ನುವುದಾದರೆ ಆತ್ಮ ಶಾಶ್ವತವೆಂದು ಹೇಗೆ ನಂಬುವುದು? ಹಿಂದೆ ಜೈಗೀಷವ್ಯ ಹಾಗೂ ಜನಕ ಮುನಿಗಳು ಬಿಡುಗಡೆ ಪಡೆದ ಈ ಜ್ಞಾನ ನನಗೆ ಸಾಕಾಗದೇ ನಾನು ಉತ್ತರವನ್ನು ಹುಡುಕಿ ಮುಂದೆ ಹೋಗುವುದಾಗಿ ತಿಳಿಸಿದೆ. ಅವರ ಆಶೀರ್ವಾದ ಪಡೆದು ಮುಂದೆ ಹೋದೆ. ನಿರಂಜನಾ ನದಿಯ ತಟದಲ್ಲಿದ್ದ ಉದ್ಧಕನ ಆಶ್ರಮ ಸೇರಿದೆ. ಹಿಂದೆ ನನ್ನನ್ನು ಪರಿತ್ಯಜಿಸಿ ಹೋಗಿದ್ದ ಐವರು ಪರಿವ್ರಾಜಕರು ಇಲ್ಲಿ ಮತ್ತೆ ಸಿಕ್ಕರು. ಅಲ್ಲಿ ತಪದಲ್ಲಿ ತೊಡಗಿದಾಗ ಈ ಪರಿವ್ರಾಜಕರೇ ನನ್ನ ಸೇವೆಗೆ ನಿಂತರು. ಅಲ್ಲಿ ಘನಘೋರ ತಪಸ್ಸು ಮಾಡಿದೆ. ಚಳಿಗಾಲದಲ್ಲಿ ನಡುಗುತ್ತಾ, ಮಳೆಗಾಲದಲ್ಲಿ ಸೂರಿಲ್ಲದೇ ನೆನೆಯುತ್ತಾ, ಬೇಸಿಗೆಯಲ್ಲಿ ನೆರಳಿಲ್ಲದೇ ತೂರಿ ಬರುತ್ತಿದ್ದ ಬಿಸಿಗಾಳಿಗೆ ಬೆವರುತ್ತಾ ರಾತ್ರಿ ಉರುಟಾದ ನೆಲದ ಮೇಲೆ ಮಲಗುತ್ತಾ, ದಿನಗಟ್ಟಲೆ ಊಟವಿಲ್ಲದೇ ನಿಸರ್ಗದ ಸಂಸರ್ಗದಲ್ಲೇ ಉಂಡು ಉಟ್ಟು ಮಲಗುತ್ತಿದ್ದೆ. ಹುಲಿ, ಸಿಂಹ, ಚಿರತೆ, ಚಿಗರೆ, ಕರಡಿ, ಕಾಡುಹಂದಿ, ಕಾಡೆಮ್ಮೆ, ಕಾಳಿಂಗ, ಹೆಬ್ಬಾವುಗಳ ನಡುವೆ ಬದುಕಿದೆ. ಒಮ್ಮೆಯೂ ನಾನು ಅವುಗಳಿಗೆ ಹೆದರಲಿಲ್ಲ, ಅವೂ ನನ್ನನ್ನು ಹೆದರಿಸಲಿಲ್ಲ.

ಯೋಗದಿಂದ ಮನಸ್ಸನ್ನು, ಪ್ರಜ್ಞೆಯನ್ನು ಸಂಪೂರ್ಣ ಹತೋಟಿಗೆ ತೆಗೆದುಕೊಂಡು ಏಕಾಗ್ರತೆಯನ್ನು ಸಾಧಿಸಿದೆ. ಒಂಥರ ಅಂತರ್ಮುಖವಾದ, ಶೂನ್ಯವಾದ, ಅನಂತತೆಯ ದಿವ್ಯಾನುಭೂತಿಯಲ್ಲಿ ತೇಲಿಹೋದೆ. ರಾಗ, ದ್ವೇಷ, ಲೋಭ, ಮೋಹ, ಮದ, ಮತ್ಸರಗಳೆಲ್ಲದರ ಗಡಿಯನ್ನು ದಾಟಿ ಹೋದೆ. ನಾನು ಏನನ್ನು ಅರಿಯಲು ಹೊರಟೆನೋ ಅದನ್ನು ಅರಿಯುವ ಮೊದಲೇ ನಾನು ಸಾಯಬಾರದೆಂದು ನಿರ್ಧರಿಸಿದ್ದರೂ ನದಿಯಲ್ಲಿ ಒಮ್ಮೆ ಸ್ನಾನ ಮಾಡಲು ಹೋದಾಗ ಅದರ ಸೆಳೆತವನ್ನು ತಡೆಯುವಷ್ಟೂ ಶಕ್ತಿ ಇಲ್ಲದೆ ಕೊಚ್ಚಿಹೋಗುತ್ತಿದ್ದೆ. ಆಗ ಗೌಳಿಗಿತ್ತಿ ಸುಜಾತ ಎಂಬಾಕೆ ನನ್ನನ್ನು ರಕ್ಷಿಸಿ ಸಿಹಿಯಾದ ಪಾಯಸ ನೀಡಿದಳು. ಮತ್ತೆ ಜೀವ ಚಿಮ್ಮುವಿಕೆ ಪಡೆದು, ಆಕೆಗೆ ಕೃತಜ್ಞತೆ ಸಲ್ಲಿಸಿ ಮುಂದಿನ ಧ್ಯಾನ ಕೇಂದ್ರವನರಸುತ್ತ ಮತ್ತೆ ನಡೆದೆ. ಒಂದೇ ಸ್ಥಳದಲ್ಲಿದ್ದರೆ ಆ ಜಾಗದ ಬಗ್ಗೆ ವ್ಯಾಮೋಹ ಬರಬಾರದಲ್ಲ. ಉರುವೇಲ ದಾಟಿ ಗಯೆಗೆ ಬಂದೆ. ಆಗಲೇ ಸಂಜೆಯಾಗಿತ್ತು. ಅಲ್ಲೊಂದು ವಿಶಾಲ ಅಶ್ವತ್ಥವೃಕ್ಷ. ಧ್ಯಾನಕ್ಕೆ ಕೂರಲು ಸೂಕ್ತವಾಗಿತ್ತು. ಪೂರ್ವಕ್ಕೆ ಮುಖ ಮಾಡಿ ಪದ್ಮಾಸನದಲ್ಲಿ ಕುಳಿತೆ. ಆ ಮರದ ತಂಗಾಳಿಯಿಂದ ಉಂಟಾಗುತ್ತಿದ್ದ ಪ್ರಸನ್ನತೆಯ ಅನುಭೂತಿಯಿಂದಾಗಿ ಬೋಧಿಯಾಗುವ ತನಕ ಈ ಜಾಗ ಬಿಡಬಾರದೆಂದು ನಿಶ್ಚಯಿಸಿದೆ. ಏಕಾಗ್ರಚಿತ್ತನಾಗಿ ತಪಸ್ಸು ಮಾಡಿದೆ. ಭ್ರೂಮಧ್ಯೆ ನೀಲಿ ಬೆಳದಿಂಗಳು... ಶಿವನ ಮೂರನೇ ಕಣ್ಣಿನಂತೆ... ಸಾಕ್ಷಾತ್ಕಾರವಾದಂತಾಯಿತು. ಕಣ್ಣಮುಂದೆ ದಿವ್ಯವಾದ ಬೆಳಕು! ಝಗ್ಗನೇ ಬೆಳಕಾದಂತೆ... ಜ್ಞಾನದ ಉದಯವಾದಂತೆ... ಎಲ್ಲ ದುಃಖಕ್ಕೂ ಪರಿಹಾರ ಸಿಕ್ಕಂತೆ!

ಈ ಲೋಕದಲ್ಲಿ ಯಾವುದೂ ಶಾಶ್ವತವಲ್ಲ. ಎಲ್ಲವೂ ನಿರಂತರ ಬದಲಾಗುತ್ತಲೇ ಇರುತ್ತದೆ. ಬದಲಾವಣೆಯೊಂದೇ ಶಾಶ್ವತ. ಕ್ರಿಯೆಗೆ ಪ್ರತಿಕ್ರಿಯೆ ಇದ್ದೇ ಇರುತ್ತದೆ. ಇದೇ ಸತ್ಯ. ಸತ್ಯವನ್ನು ಅರಿಯದ ಲಾಲಸೆಯೇ ದುಃಖದ ಮೂಲ. ಆಸೆ ಪಡದಿದ್ದರೆ ನಿರಾಸೆ ಇರುವುದೇ ಇಲ್ಲವಲ್ಲ. ನಿರಾಸೆ ಇಲ್ಲವೆಂದಾದರೆ ದುಃಖಕ್ಕೆ ಕಾರಣವೇ ಇಲ್ಲವಲ್ಲ. ಅಂದರೆ ಎಲ್ಲ ದುಃಖಕ್ಕೂ ಮೂಲಧಾತು ಆಸೆಯೇ! ಮೋಹ, ರಾಗಗಳಿಂದ ಪರಿಮುಕ್ತನಾದರೆ ದುಃಖದಿಂದಲೂ ಪರಿಮುಕ್ತನಾದಂತೆ ತಾನೇ.

ಅವತ್ತು ವೈಶಾಖಶುದ್ಧ ಪೂರ್ಣಿಮೆಯ ದಿನ. ನಾನು ಹುಟ್ಟಿದ್ದು ಅದೇ ದಿನ, ತಿಥಿ ಇರಬೇಕು. ಬೆಳ್ನನೆಯ ಹಾಲಿನಂಥ ಬೆಳದಿಂಗಳು ಇಡೀ ಭೂಮಂಡಲವನ್ನು ಬೆಳಗಿತ್ತು. ನನ್ನ ಕಣ್ಣ ಮುಂದೆ ಬೆಳ್ಳಿತಟ್ಟೆಯಂಥ ಚಂದ್ರ ಉದಯಿಸುತ್ತಿದ್ದಾಗ ನನ್ನ ತಪಸ್ಸು ಆರಂಭವಾಗಿತ್ತು. ನಿದ್ದೆಯಿಲ್ಲದ ರಾತ್ರಿ. ಇಡೀ ರಾತ್ರಿ ಹಾಗೇ ಕುಳಿತಿದ್ದೆನೆಂಬುದೇ ಅರಿವಿಲ್ಲ. ಎಚ್ಚರವಾದಾಗ ಅದೇ ಚಂದ್ರ ನನ್ನ ಬೆನ್ನ ಹಿಂದೆ ಬಂದುಬಿಟ್ಟಿದ್ದ. ಚಂದ್ರಪ್ರಭೆಯ ಆ ಕಿರಣಗಳಲ್ಲಿ ಅಶ್ವತ್ಥವೃಕ್ಷದ ಎಲೆಗಳು ನೆರಳುಬೆಳಕಿನ ಲಾಸ್ಯವಾಡುತ್ತಿದ್ದವು. ಹಿಂದಿರುಗಿ ನೋಡಿದೆ. ನನ್ನ ಭ್ರೂಮಧ್ಯೆಯಲ್ಲಿ ಕಂಡಂಥದೇ ಬೆಳಕು! ಬುದ್ಧತ್ವ ಸಿದ್ಧಿಸಿತೇ? ಸಿದ್ಧಾರ್ಥ ಗೌತಮನಾದ ನಾನು ಬುದ್ಧನಾದೆನೇ? ನಾನು ಬುದ್ಧನಾದೆನೋ ಇಲ್ಲವೋ ಎಂದು ಅರಿಯಲೇ ಇಪ್ಪತ್ತೊಂದು ದಿನ ಉಪವಾಸ ಮಾಡಲು ನಿರ್ಧರಿಸಿದೆ. ಈ ಇಪ್ಪತ್ತೊಂದು ದಿನಗಳಲ್ಲಿ ಒಂದು ಸ್ಪಷ್ಟತೆ ಬರಲಾರಂಭಿಸಿತು. ಇರುವುದನ್ನು ಇರುವ